**ಸಾಕ್ಷಿಯನ್ನು ದಿಃ 05.07.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ತೀರ್ಪುಋಣಿ ಪರ ವಕೀಲರಿಂದಃ**

1. ಉದಯಕುಮಾರ ರವರು ಚಿಕ್ಕನೇರಳೆ ಗ್ರಾಮದಲ್ಲಿ ವ್ಯವಸಾಯ ಮಾಡುತ್ತಾರೆ. ಅವರ ಜಮೀನಿನ ಸರ್ವೇ ನಂಬರ್ ನನಗೆ ಗೊತ್ತಿಲ್ಲ, ಜಮೀನು ಗೊತ್ತು.

2. ಉದಯಕುಮಾರ ರವರ ತಂದೆ ಲಕ್ಕೇಗೌಡ ರವರಿಗೆ 2 ಜನ ಮಕ್ಕಳು. ಅವರಲ್ಲಿ ಒಂದು ಗಂಡು ಹಾಗೂ ಒಬ್ಬ ಹೆಣ್ಣು ಮಗಳು.

3. ಸದರಿ ಲಕ್ಕೇಗೌಡರವರಿಗೆ ಸಹೋದರರು ಇದ್ದಾರೆ.

4. ನೀವು ಹಾಜರುಪಡಿಸಿರುವ ಪಹಣಿಗಳು ಯಾರಿಗೆ ಸಂಬಂಧಪಟ್ಟಿವೆ ಎಂದರೆ, ಅವರು ಅವರ ತಂದೆ ಹೆಸರಿನಲ್ಲಿ ಇವೆ ಎಂದು ನುಡಿಯುತ್ತಾರೆ.

5. ಅವರ ತಂದೆ ಹೆಸರಿನಲ್ಲಿ ಇಲ್ಲ ಎಂದರೆ ಸರಿಯಲ್ಲ.

6. ಉದಯಕುಮಾರ ರವರ ಸ್ವಂತ ಹೆಸರಿನಲ್ಲಿರುವ ಬಗ್ಗೆ ದಾಖಲೆ ನೀಡಿದ್ದೀರಾ ಎಂದರೆ, ಅವರ ಹೆಸರಿನಲ್ಲಿ ಇಲ್ಲ, ಅವರ ತಂದೆ ಹೆಸರಿನಲ್ಲಿ ಇವೆ ಎಂದು ನುಡಿಯುತ್ತಾರೆ.

7. ಉದಯಕುಮಾರ ರವರು ಅವರ ತಂದೆ ತಾಯಿಯಿಂದ ಬೇರೆಯಾಗಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ, ಒಟ್ಟಿಗೆ ಇದ್ದಾರೆ ಎಂದು ನುಡಿಯುತ್ತಾರೆ.

8. ನೀವು ಹಾಜರುಪಡಿಸಿರುವ ದಾಖಲೆಗಳಿಗೆ ಹಾಗೂ ಉದಯಕುಮಾರ ರವರಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

9. ಉದಯಕುಮಾರ ರವರಿಗೆ ಚರಾಸ್ಥಿ ಅಥವಾ ಸ್ಥಿರಾಸ್ಥಿ ಯಾವುದೂ ಇಲ್ಲ ಎಂದರೆ, ಇದೆ, ಬೈಕು, ಬ್ಯಾರನ್ ಇವೆ ಎಂದು ನುಡಿಯುತ್ತಾರೆ.

10. ಉದಯಕುಮಾರ ರವರ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲದ ಕಾರಣ, ಅವರಿಗೆ ಹಣ ಪಾವತಿಸಲು ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.) ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ